ಮಾಡಿಸಬೇಕು ಮತ್ತು ಬಾಡಿಗೆ ವಸೂಲ್ಮಾಡಬೇಕೆಂದು ತಮ್ಮ ಮೂಲಕ ಆಗ್ರಹಿಸುತ್ತಿದ್ದೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಅಧ್ಯಕ್ಷರೆ, ಭಾರಿ ಒಳ್ಳೆಯ ಪ್ರಶ್ನೆ ಬಂದಿದೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಸದಸ್ಯರು ಹೇಳಿರುವುದು ಮಹತ್ವವಾದ ವಿಚಾರ, ಈ ಬಗ್ಗೆ ಸರ್ಕಾರ ಗಮನ ಕೊಡುತ್ತದೆ, ಇಂದೇ ಸೂಚನೆ ಕೊಡುತ್ತೇನೆ, ಅದರ ಕಬ್ಜಾ ತೆಗೆದುಕೊಳ್ಳಬೇಕೆನ್ನುವ ಕ್ರಮ ತೆಗೆದುಕೊಳ್ಳಬೇಕೆನ್ನುವ ಸೂಚನೆಯನ್ನೂ ಕೂಡ ಕೊಡುತ್ತೇನೆ. ಆದರೆ ಮೂರೂವರೆ ಲಕ್ಷ ರೂಪಾಯಿಗಳು ಏನಿದೆ, ಅದರ ಕಬ್ಜಾ ತೆಗೆದುಕೊಳ್ಳುವುದರ ಜೊತೆಗೆ ಮೂರೂವರೆ ಲಕ್ಷ ರೂಪಾಯಿಗಳು ಇವತ್ತು ಇಲ್ಲವೆಂದರೆ, land revenue ಆಗಿ collect ಮಾಡಬೇಕಾಗುತ್ತದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

iv) ವಿಷಯ: ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡುವ ಬಗ್ಗೆ.

– 0 –

ಶ್ರೀ ಸಿ.ಎನ್.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರ 34 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿದೆ, ಆದರೆ ಚೆನ್ನರಾಯಪಟ್ಟಣ ತಾಲ್ಲೂಕು ಬರಗಾಲಪೀಡಿತ ಪಟ್ಟಿಯಲ್ಲಿ ಇಲ್ಲ. ಏಕೆಂದರೆ, ಪಕ್ಕದ ಅರಸಿಕೆರೆ ತಾಲ್ಲೂಕಿಗೆ ಹೋಲಿಕೆ ಮಾಡಿದರೆ ನಮ್ಮದೇನೂ ಹೊರತಾಗಿಲ್ಲ. ಈಗಾಗಲೇ ಸುಮಾರು 100 ಹಳ್ಳಿಗಳಲ್ಲಿ ಕುಡಿಯುವ ನೀರಿನ ಹಾಹಾಕಾರ ಎದ್ದಿದೆ. ಕಳೆದ ಮಳೆಯಲ್ಲಿ ಕೇವಲ ಒಂದು ಎಕರೆಗೆ 2 ಕ್ವಿಂಟಾಲ್ ಕೂಡ ರಾಗಿ ಬೆಳೆಯಲಾರದ ಪರಿಸ್ಥಿತಿ ನಮ್ಮ ತಾಲ್ಲೂಕಿನಲ್ಲಿ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ, ಕಳೆದ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರತಿ ಪಂಚಾಯತಿಯಲ್ಲಿ ಮಳೆಮಾಪನ ಕೇಂದ್ರಗಳನ್ನು ಸ್ಥಾಪನೆ ಮಾಡುತ್ತೇವೆಂದು ತಿಳಿಸಿದ್ದರು, ಹೋಬಳಿಗೊಂದು ಮಳೆ ಮಾಪನ ಕೇಂದ್ರಗಳಿದ್ದಾವೆ, ಅದರಿಂದ ಸರಿಯಾದ ವರದಿ ಬಂದಿಲ್ಲ. ಆದುದರಿಂದ

ಚೆನ್ನರಾಯಪಟ್ಟಣ ತಾಲ್ಲೂಕನ್ನು ಬರಗಾಲಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ, ಅದಕ್ಕೆ ಉತ್ತರ ಕೊಡಬೇಕೆಂದೂ ವಿನಂತಿ ಮಾಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಕೆಲವು ತಾಲ್ಲೂಕುಗಳನ್ನು ಸೆಪ್ಟಂಬರ್ 30 ಅಂತ್ಯಕ್ಕೆ ಬರಗಾಲಕ್ಕೆ ತುತ್ತಾಗಿರುವ ತಾಲ್ಲೂಕುಗಳೆಂದು ಘೋಷಣೆಯಾಗಿದೆ. ಅದರಲ್ಲಿ ಅರಸೀಕೆರೆ ತಾಲ್ಲೂಕು ಕೂಡ ಇದೆ, ಅಂಕಿಅಂಶ ತೇವಾಂಶ ಹಿನ್ನೆಲೆಯಾಗಿರುವುದು. ಚೆನ್ನರಾಯಪಟ್ಟಣದಲ್ಲಿ ಇದೇ ಪರಿಸ್ಥಿತಿ ಇದೆ ಎನ್ನುವುದಿದೆ ಹಾಗಾಗಿ, ಇನ್ನೂ ಕೆಲವು ತಾಲ್ಲೂಕುಗಳನ್ನು ಪರಿಶೀಲನೆ ಮಾಡಬೇಕು ಮತ್ತು ಜಿಲ್ಲಾಧಿಕಾರಿಗಳಿಂದ ವಸ್ತುಸ್ಥಿತಿಯನ್ನು ತರಿಸಬೇಕೆನ್ನುವ ತೀರ್ಮಾನವನ್ನೂ ಕೂಡ ಮಾಡಿದ್ದೇವೆ, ಅದನ್ನು ಮಾಡುವ ಸಂದರ್ಭದಲ್ಲಿ ಇದನ್ನು ಗಮನದಲ್ಲಿಟ್ಟುಕೊಂಡು ಮಾಡುವ ಪ್ರಯತ್ನವನ್ನು ಮಾಡುತ್ತೇವೆ.

v) ವಿಷಯ: ಮಾಯಕೊಂಡ ಮೀಸಲು ವಿಧಾನಸಭಾ ಕ್ಷೇತ್ರಕ್ಕೆ ತುಂಗಭದ್ರಾ ನೀರು ಸರಬರಾಜು ಮಾಡುವ ಬಗ್ಗೆ.

– 0 –

ಶ್ರೀ ಕೆ.ಶಿವಮೂರ್ತಿ(ಮಾಯಕೊಂಡ): ಮಾನ್ಯ ಅಧ್ಯಕ್ಷರೆ, ತುಂಗಭದ್ರಾ ನದಿ ನೀರು ನನ್ನ ಕ್ಷೇತ್ರಕ್ಕೆ ಕುಡಿಯುವುದಕ್ಕೆ 6 ಕಿ.ಮೀ. ದೂರದಲ್ಲಿದೆ. ಪಕ್ಕದಲ್ಲಿರುವ ಊರಾಗಿರುವ ತೋಣಸಿ ಗ್ರಾಮ ಅಲ್ಲಿ ಯೂನಿವರ್ಸಿಟಿ ಇದೆ, ಅಲ್ಲಿ ಹಾಸ್ಟೆಲ್ಸ್ ಇದೆ, ಅಲ್ಲಿಗೆ ಬಹಳಷ್ಟು ಜನ ಗ್ರಾಮೀಣ ಪ್ರದೇಶದ ಮಕ್ಕಳೇ ಬರುತ್ತಿದ್ದಾರೆ, ಪ್ರತಿ ದಿವಸ ಕುಡಿಯುವುದಕ್ಕೆ ನೀರಿಲ್ಲ ಎನ್ನುವ ಒಂದು ಅಹವಾಲನ್ನು ಹೇಳುತ್ತಿದ್ದಾರೆ. ವಿಶ್ವವಿದ್ಯಾಲಯದಲ್ಲಿರುವ Hostel ಗೆ, Gents Hostel ಗೆ ಕುಡಿಯುವುದಕ್ಕೆ ನೀರಿಲ್ಲ, ಇದನ್ನು ನದಿ ನೀರಿನಿಂದ ತರಬೇಕೆನ್ನುವ ಪ್ರಾಜೆಕ್ಟ್ ಬಗ್ಗೆ ಹೇಳುತ್ತಿದ್ದಾರೆ. ಹಾಗೆ ಕೆರೆಗಳಿಗೆ ನೀರು